# ವಾರ್ತಾ ವಿಶ್ಲೇಷಣೆ

## ದುರ್ಘಟನೆಯಲ್ಲಿ ಸಂಘಟನೆ

ವ್ಯಕ್ತಿ ಮೂಲಭೂತವಾಗಿ ಸ್ವಾರ್ಥಿ ಎಂದು ಹೇಳುವುದುಂಟು. ಆದರೆ ಅವನಲ್ಲಿ ಪರಾರ್ಥಪ್ರಜ್ಞೆಯೂ ಇದೆ. ಈ ಸ್ವಾರ್ಥ ಪರಾರ್ಥಗಳ ಸಂಘರ್ಷವೇ ನಮ್ಮ ಎಷ್ಟೋ ದುಃಖಗಳಿಗೆ ಮೂಲ. ವ್ಯಕ್ತಿ ಎಷ್ಟೇ ಸ್ವಾರ್ಥಿಯಾದರೂ ಪರಾರ್ಥವನ್ನು ಸಂಪೂರ್ಣ ಕಡೆಗಣಿಸುವಂತಿಲ್ಲ—ಸ್ವಾರ್ಥಕ್ಕಾದರೂ ಅದರ ಕಡೆ ಗಮನ ಕೊಡಬೇಕಾಗುತ್ತದೆ.

ಮನುಷ್ಯನು ಮೂಲಭೂತವಾಗಿ ಸ್ವಾರ್ಥಿಯಾಗಿದ್ದರೆ ಪ್ರಾಕೃತಿಕ ವಿಕೋಪ, ಸೆಪ್ಟೆಂಬರ್ ೧೧ರ ದುರ್ಘಟನೆ ಮುಂತಾದ ಸಂದರ್ಭಗಳಲ್ಲಿ ಅವನು ಹೆಚ್ಚು ಸ್ವಾರ್ಥಿಯಾಗಬೇಕಾಗಿತ್ತು. ಆದರೆ ಅದರ ಬದಲು ಅಂತಹ ಸಂದರ್ಭಗಳಲ್ಲಿ ವ್ಯಕ್ತಿಗಳು ಉದ್ವೇಗಕ್ಕೆ ಒಳಗಾಗದೆ, ತಮ್ಮ ಸ್ತಿಮಿತವನ್ನು ಕಾಪಾಡಿಕೊಂಡು ಇತರರಿಗೆ ಸಹಾಯ ಮಾಡುವ ಪ್ರವೃತ್ತಿ ಕಂಡುಬರುತ್ತದೆ. ವಿಶ್ವವಾಣಿಜ್ಯ ಕೇಂದ್ರ ಕಟ್ಟಡವು ಕೆಳಗುರುಳುತ್ತಿರುವಾಗ, ೧೦,೦೦೦ ಜನರು ಕೆಳಗೆ ಓಡಿಬರುತ್ತಿರುವಾಗ ಅವರಲ್ಲಿ ಸ್ವಾರ್ಥತೆಗಿಂತ ಸಾಮಾಜಿಕ ಪ್ರಜ್ಞೆ ಅಧಿಕವಾಗಿದ್ದುದು ಗಮನಾರ್ಹವಾದುದು. "ತುಂಬ ಬಿಕ್ಕಟ್ಟಿನ ಸ್ಥಿತಿಯಲ್ಲಿ, ಎಲ್ಲವೂ ನುಚ್ಚು ನೂರಾಗುತ್ತಿರುವಾಗ, ಮಾನವನ ನಿಜರೂಪ ಹೊರಬರುತ್ತದೆ—ಅದು ಮುಖ್ಯವಾಗಿ ಮಾನವೀಯವಾಗಿರುತ್ತದೆ. ಪರಾರ್ಥಪ್ರಜ್ಞೆ (altruism)ಅಷ್ಟೇನೂ ಅಪವಾದವಾದದ್ದಲ್ಲ, ಅದೇ ಸ್ವಾಭಾವಿಕವಾದುದು" ಎಂದು ಹೇಳುತ್ತಾರೆ, ದುರ್ಘಟನೆಯ ಸಂದರ್ಭದ ಸಾಮಾಜಿಕ ವರ್ತನೆಯ ಬಗ್ಗೆ ವಿಶೇಷಜ್ಞರಾದ ಲೀ ಕ್ಲಾರ್ಕ್ ಅವರು (*Los Angeles Times*, 9-10-2002).

ಸ್ಪರ್ಧೆಯಲ್ಲ, ಪರಸ್ಪರ ಪ್ರೀತಿ ಸಹಕಾರಗಳೇ ವಿಕಾಸದ ತಳಹದಿ ಎಂದು ಸ್ವಾಮಿ ವಿವೇಕಾನಂದರು ಹೇಳುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಮನುಷ್ಯನು ಎಷ್ಟೇ ಸ್ವಾರ್ಥಿಯಾದರೂ ಪರಾರ್ಥಪ್ರಜ್ಞೆ ಅವನಲ್ಲಿ ಇರುವುದರಿಂದಲೇ ಸಮಾಜ ಇನ್ನೂ ಬದುಕಿ ಉಳಿದಿದೆ. "ವಿಕಾಸದ ಪ್ರಕ್ರಿಯೆಯಲ್ಲಿ ಸಹಕಾರದ ಪ್ರಮುಖ ಪಾತ್ರವನ್ನು ಜೀವಶಾಸ್ತ್ರಜ್ಞರು ಗುರುತಿಸುವಂತೆ ಇತ್ತೀಚೆಗಿನ ಸಂಶೋಧನೆಗಳು ಒತ್ತಾಯಿಸುತ್ತಿವೆ" ಎನ್ನುತ್ತಾರೆ ಫ್ರಿಟ್‌ಜಾಫ್ ಕಾಪ್ರ (*The Web of Life*, p. 231). ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ —ಎಂಬ ಗೀತೋಕ್ತಿಯೇ ವಿಕಾಸದ ತಳಹದಿ ಎಂದಂತಾಯಿತು. ಆದರೆ ಗೀತೆಯ ತವರೂರಾದ ಭಾರತಕ್ಕೂ ಈ ಮೇಲಿನ ಮಾತು ಅನ್ವಯಿಸುತ್ತದೆಯೇ? ನಾವಿನ್ನೂ ವಿಕಾಸದ ಪ್ರಕ್ರಿಯೆಯಲ್ಲಿ ಕೆಳಗಿನ ಹಂತದಲ್ಲಿರುವೆವೆ? ದುರ್ಘಟನೆಗಳನ್ನು ತಮ್ಮ ಸ್ವಾರ್ಥಸಾಧನೆಗೆ ಉತ್ತಮ ಅವಕಾಶಗಳನ್ನಾಗಿ ಬಳಸಿಕೊಳ್ಳುವ ಕ್ರೂರ, ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳು, ಮತ್ತಿತರರು ತಾವು ಮಾನವರಾಗಿ ಬಾಳುವುದನ್ನು ಇನ್ನೂ ಕಲಿಯಬೇಕಾಗಿದೆ. ಅಮೆರಿಕದಿಂದ ಬೇರೇನೇನೊ ಕೆಲಸಕ್ಕೆ ಬಾರದುದನ್ನು ಕಲಿಯುವ ನಮ್ಮ ಯುವಕರು ಇಂತಹ ಉತ್ತಮ ಮಾನವೀಯ ಗುಣಗಳನ್ನೇಕೆ ಕಲಿಯಬಾರದು?

❄

## ಜಲವಿವಾದ

ಮಳೆರಾಯನ ಅನುಗ್ರಹದಿಂದ ಕಾವೇರಿ ವಿವಾದದ ಕಾವು ತಾತ್ಕಾಲಿಕವಾಗಿ ತಣ್ಣಗಾಗಿದೆ. ಈ ವಿವಾದವು ಬುದ್ಧನ ಕಾಲದ ಒಂದು ಜಲವಿವಾದವನ್ನು ನೆನಪಿಗೆ ತರುತ್ತದೆ.

ರೋಹಿಣಿ ಎಂಬ ನದಿ ಇತ್ತು. ನದಿಯ ಒಂದು ಭಾಗದಲ್ಲಿ ಶಾಕ್ಯರೂ ಇನ್ನೊಂದು ಭಾಗದಲ್ಲಿ ಕೋಲಿಯರೂ ವಾಸಿಸುತ್ತಿದ್ದರು. ನದಿಗೆ ಅಣೆಕಟ್ಟು ಹಾಕಿ ಆ ನೀರನ್ನು ಬಳಸಿ ಭತ್ತ ಬೆಳೆಯುತ್ತಿದ್ದರು. ಒಮ್ಮೆ ಅನಾವೃಷ್ಟಿಯಿಂದಾಗಿ ನೀರು ಕಡಿಮೆಯಾಯಿತು. ಈಗ ನೀರು ಹಂಚಿಕೊಳ್ಳುವುದರಲ್ಲಿ ವಿವಾದ ಉಂಟಾಯಿತು. ಶಾಕ್ಯರು ಮತ್ತು ಕೋಲಿಯರು ಇಬ್ಬರೂ ಪೂರ್ತಿ ನೀರು ತಮಗೇ ಬೇಕೆಂದು ಪಟ್ಟು ಹಿಡಿದರು. "ಪೂರ್ತಿ ನೀರು ನಮಗೆ ಕೊಡಿ, ನಾವೇ ಭತ್ತ ಬೆಳೆದು ನಿಮಗೂ ಕೊಡುತ್ತೇವೆ" ಎಂಬುದು ಎರಡೂ ಪಕ್ಷದವರ ಛಲ. ಯಾವ ಮಾತುಕತೆಯೂ ಪ್ರಯೋಜನಕ್ಕೆ ಬಾರದೆ ಎರಡೂ ಪಕ್ಷದವರು ಶಸ್ತ್ರಸಜ್ಜಿತರಾಗಿ ಯುದ್ಧರಂಗಕ್ಕಿಳಿದರು. ಇನ್ನೇನು ಯುದ್ಧ ಪ್ರಾರಂಭವಾಯಿತು ಎನ್ನುವ ಹೊತ್ತಿಗೆ ಬುದ್ಧ ಅಲ್ಲಿ ಪ್ರತ್ಯಕ್ಷನಾದ.

ಜಗಳದ ಕಾರಣವನ್ನು ತಿಳಿದು ಬುದ್ಧನು ಹೇಳಿದ: "ನೀರಿಗೋಸ್ಕರ ರಕ್ತಪಾತವೆ? ಬದುಕಬೇಕೆಂದು ಪ್ರಾಣಬಿಡುತ್ತೀರಾ? ಇದೆಂಥ ಅವಿವೇಕ? ಇಬ್ಬರಿಗೂ ಆಗುವ ಭತ್ತವನ್ನು ಬೆಳೆಯುವುದು ಮುಖ್ಯವೊ ಅಥವಾ ಯಾರು ಭತ್ತ ಬೆಳೆಯುತ್ತಾರೆ ಎಂಬುದು ಮುಖ್ಯವೊ?" ಬುದ್ಧನ ಮಾತಿಗೆ ಬೆಲೆ ಕೊಟ್ಟು ಅವರು ಸದ್ಯಕ್ಕೆ ಯುದ್ಧ ನಿಲ್ಲಿಸಿದರು.

ವಿವಾದ ಚಳುವಳಿಗಳ ಹೆಸರಿನಲ್ಲಿ ಸಾರ್ವಜನಿಕ ಆಸ್ತಿಯನ್ನು ನಾಶಮಾಡುವ, ಮುಗ್ಧರನ್ನು ಹಿಂಸಿಸುವ, ಜನಜೀವನವನ್ನು ಅಸ್ತವ್ಯಸ್ತಗೊಳಿಸುವ ನಮ್ಮ ಜನರಿಗೆ ಬುದ್ಧಿ ಹೇಳುವ ಬುದ್ಧರು ಯಾರಿದ್ದಾರೆ?

ಬದುಕುವುದಕ್ಕಾಗಿ ಪ್ರಾಣ ಕಳೆದುಕೊಳ್ಳುವುದು! ಎಂಥ ವಿಪರ್ಯಾಸ! ಇಲ್ಲಿ ಬದುಕಿಗಿಂತ ಸ್ವಾಭಿಮಾನವೇ ಪ್ರಧಾನವಾಗುತ್ತದೆ, ಅದಕ್ಕಾಗಿಯೇ ಹೋರಾಟ. ಆದರೆ ಈ ರೀತಿ ಕ್ಷುಲ್ಲಕ ಹೋರಾಟದಿಂದ ನಮ್ಮ ಸ್ವಾಭಿಮಾನವನ್ನೇ ನಾವು ಕಳೆದುಕೊಳ್ಳುತ್ತೇವೆ—ತೀರಾ ಕಳಪೆಯ ವ್ಯಕ್ತಿಗಳಾಗುತ್ತೇವೆ— ಎಂಬುದನ್ನು ನಾವು ಮರೆಯಬಾರದು. ಉತ್ತಮ ಮಟ್ಟದ ಜೀವನದಲ್ಲಿ ನಮ್ಮ ಸ್ವಾಭಿಮಾನವನ್ನು ಮರೆಯುವಂತಾದರೆ ಚೆನ್ನ.

❄